ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 30 ನೇ ಸೆಪ್ಟೆಂಬರ್, 2020

ಉಪ ವಿಭಾಗಾಧಿಕಾರಿಗಳು, ತಹಶೀಲ್ದಾರ್ ಕರ್ತವ್ಯದ ಕುರಿತು

ಶ್ರೀ ಎಸ್. ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ) -

1019 (1217) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ರಾಜ್ಯದಲ್ಲಿರುವ ಉಪ ವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರ ಕಛೇರಿಗಳ ಸಂಖ್ಯೆ ಎಷ್ಟು; ಪ್ರತಿ ಉಪವಿಭಾಗಾಧಿಕಾರಿ ಮತ್ತು ತಹಶೀಲ್ದಾರ್‌ಗಳ ಕಛೇರಿಗೆ ಮಂಜೂರಾತಿಯಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; ಕೊರತೆಯಿರುವ ಹುದ್ದೆಗಳ ಸಂಖ್ಯೆ ಎಷ್ಟು; ಕೊರತೆಯಿರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು; (ಜಿಲ್ಲಾವಾರು, ಹುದ್ದೆವಾರು ವಿವರ ನೀಡುವುದು)

(ಆ) ಉಪ ವಿಭಾಗಾಧಿಕಾರಿ ಮತ್ತು ತಹಶೀಲ್ದಾರರವರಿಗೆ ಅರೆ ನ್ಯಾಯಿಕ ಅಧಿಕಾರವನ್ನು ಮಾಡುವ ಕಾಯ್ದೆಗಳು ಯಾವುವು; (ಕಾಯ್ದೆವಾರು ವಿವರ ನೀಡುವುದು)

(ಇ) ಉಪ ವಿಭಾಗಾಧಿಕಾರಿ/ತಹಶೀಲ್ದಾರರವರು ಅಧ್ಯಕ್ಷರಾಗಿರುವ ಸದಸ್ಯ ಕಾರ್ಯದರ್ಶಿಯಾಗಿರುವ ಸದಸ್ಯರಾಗಿರುವ ಸಮಿತಿಗಳು ಯಾವುವು; ಇವರು ಯಾವ ಯಾವ ಇಲಾಖೆಗಳ ಯಾವ ಯಾವ ಸಮಿತಿಗಳಿಗೆ ಅಧ್ಯಕ್ಷರಾಗಿರುತ್ತಾರೆ; ಇವರು ವಾರ್ಷಿಕವಾಗಿ ಭಾಗವಹಿಸಬೇಕಾದ ಸಮಿತಿ ಸಭೆಗಳ ಸಂಖ್ಯೆ ಎಷ್ಟು? (ಅವುಗಳಲ್ಲಿ ಕಾರ್ಯನಿರ್ವಹಿಸಲು ಇರುವ ಮಾರ್ಗಸೂಚಿ ಸುತ್ತೋಲೆಯ ಪ್ರತಿಯನ್ನು ಒದಗಿಸುವುದು)